**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿಃ23-07-2026**

**ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ವಿ ಎಸ್ ವಕೀಲರಿಂದ**

ನಾನು ಕುಂಬರಗಟ್ಟೆ ಗ್ರಾಮದಲ್ಲಿ ವಾಸವಿರುತ್ತೇನೆ. ಕುಂಬರಗಟ್ಟೆ ಗ್ರಾಮಕ್ಕೂ ಬಾಗೇ ಗ್ರಾಮಕ್ಕೆ 2 ಕಿಮೀ ಇರುತ್ತದೆ. ಕುಂಬರಗಟ್ಟೆ ಯಿಂದ ಬಾಗೇ - ಬೆಳಗೋಡು ಕ್ರಾಸ್ ಗೆ 3 ಕಿಮೀ ಇರುತ್ತದೆ ಎಂದರೆ ಸರಿ. ಬಾಗೇ ಕ್ರಾಸ್ ಯಿಂದ ಹಳೇ ಬಾಗೇಗೆ 3 ಕಿಮೀ ಇದೆ ಎಂದರೆ ಸಾಕ್ಷಿ 2 ಕಿಮೀ ಇದೆ ಎಂದು ನುಡಿಯುತ್ತಾರೆ. ಕುಂಬರಗಟ್ಟೆಯಿಂದ ಹಳೇ ಬಾಗೇ ಗೆ 5 ಕಿಮೀ ಆಗುತ್ತದೆ ಎಂದರೆ ಸರಿ. ದಾವ ಆಸ್ತಿ ಹಳೇಬಾಗೆ ಗ್ರಾಮದಲ್ಲಿ ಇದೆ ಎಂದರೆ ಸರಿ. ದಾವ ಆಸ್ತಿ ಸರ್ವೆ ನಂಬರ್ 15, 2 ಎಕರೆ ಆಸ್ತಿಯ ಸಲುವಾಗಿ ಹೂಡಿರುತ್ತಾರೆ. ವಾದಿ ಹಾಜರುಪಡಿಸಿರುವ ದಾಖಲಾತಿಗಳನ್ನು ತಿಳಿದುಕೊಂಡಿರುತ್ತೇನೆ. ಅವರು ಮಂಜೂರಾತಿ ಪತ್ರ , ನಕಾಶೆ, ಪಹಣಿಗಳನ್ನು ಹಾಜರುಪಡಿಸಿರುತ್ತಾರೆಂದರೆ ಸರಿ. ಪಹಣಿಯಲ್ಲಿ ವಾದಿಯ ಹೆಸರು ನಮೂದಾಗಿದೆ ಎಂದರೆ ಸರಿ. ಈ ದಾವೆಯಲ್ಲಿ ಪದ್ಮಪೂಜಾರಿಯವರು ಪಕ್ಷಗಾರರಲ್ಲ ಎಂದರೆ ಸರಿ. ನಾನು ಹಾಜರುಪಡಿಸಿರುವ ದಾಖಲಾತಿಗಳಲ್ಲಿ ದಾವ ಆಸ್ತಿ ನನ್ನ ಹೆಸರಿನಲ್ಲಿ ಇಲ್ಲ ಎಂದರೆ ಸರಿ. ಆದರೆ ನನ್ನ ತಂದೆಯ ಹೆಸರಿನಲ್ಲಿರುತ್ತದೆ. ರವಿಚಂದ್ರ ರವರ ಹೆಸರು ಸಹ ಇರುವುದಿಲ್ಲ ಎಂದರೆ ಸರಿ.

ನನ್ನ ತಂದೆ ಚಿಕ್ಕ ಈರಯ್ಯ ರವರ ಹೆಸರು ನಮೂನೆ 53 ರಲ್ಲಿ ಸಲ್ಲಿಸಿರುವ ಅರ್ಜಿಯಲ್ಲಿರುತ್ತದೆ. ನನ್ನ ತಂದೆ ನಮೂನೆ 53 ರ ಅಡಿಯಲ್ಲಿ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸದೇ ಇದ್ದರು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ರವಿಚಂದ್ರ ರವರು ಮತ್ತು ನಾನು ದಿ 26.06.2023 ರಂದು ದಾವ ಆಸ್ತಿಯ ಬಳಿ ಬಂದು ಗಲಾಟೆ ಮಾಡಿರುತ್ತೇವೆಂದರೆ ಸರಿಯಲ್ಲ. ನಮ್ಮ ಜಾಗದಲ್ಲಿ ನಾವು ತಂತಿ ಹಾಕುತ್ತಿದ್ದಾಗ ವಾದಿ ಬಂದು ಗಲಾಟೆ ಮಾಡಿರುತ್ತಾರೆಂದು ನುಡಿಯುತ್ತಾರೆ. ವಾದಿಗೆ ನಾನು ಬೆದರಿಕೆ ಹಾಕಿರುತ್ತನೆಂದರೆ ಸರಿಯಲ್ಲ. ವಾದಿ ದಾವ ಆಸ್ತಿಯಲ್ಲಿ ಜೋಳ ಹಾಕಿರುತ್ತಾರೆ ಎಂದರೆ ಸಾಕ್ಷಿ ತಿರುಗಾಡಲು ರಸ್ತೆ ಇದ್ದು ರಸ್ತೆಯಲ್ಲಿ ಜೋಳ ಹಾಕಿರುತ್ತಾರೆಂದು ನುಡಿಯುತ್ತಾರೆ. ಸದರಿ ರಸ್ತೆ ಸ ನಂ 15 ರಲ್ಲಿ ಇರುತ್ತದೆ. ಸದರಿ ರಸ್ತೆ ನಮ್ಮ ಜಮೀನಿನಿಂದ ಬಾಗೇ ಗ್ರಾಮದ ವರೆಗೆ ಹೋಗುತ್ತದೆ. ಸ ನಂ 15 ರಲ್ಲಿ ನನ್ನ ಮಾಲೀಕತ್ವದ ಬಗ್ಗೆ ಜಮೀನು ಇರುವ ಬಗ್ಗೆ ದಾಖಲಾತಿ ಹಾಜರುಪಡಿಸಿರುತ್ತೇನೆ. ನನ್ನ ಹೆಸರಿನಲ್ಲಿರುವ ಬಗ್ಗೆ ಪಹಣಿ ಹಾಜರುಪಡಿಸಿಲ್ಲ. ನಾನು ಗಲಾಟೆ ಮಾಡಿದ್ದರಿಂದ ಪೊಲೀಸರು ಸ್ಥಳಕ್ಕೆ ಬಂದಿರುತ್ತಾರೆ ಎಂದರೆ ಸಾಕ್ಷಿ ಪೊಲೀಸರು ಸ್ಥಳಕ್ಕೆ ಬಂದು

ನ್ಯಾಯಾಲಯದಲ್ಲಿ ದಾವೆ ಇರುವುದರಿಂದ ಸಮಧಾನವಾಗಿ ತೀರ್ಮಾನ ಮಾಡಿಕೊಳ್ಳಿ ಎಂದು ತಿಳಿಸಿರುತ್ತಾರೆ.

ದಾವ ಆಸ್ತಿಯಲ್ಲಿ ವಾದಿ ಜೋಳ ಬೆಳೆದುಕೊಂಡು ಸ್ವಾಧೀನದಲ್ಲಿ ಇರುತ್ತಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 2018 ರಲ್ಲಿ ಗ್ರಾಮ ಪಂಚಾಯಿತಿಯವರು ಜಮೀನನ್ನು ಸ್ವಚ್ಚ ಮಾಡಿದ ನಂತರ ವಾದಿ ಜೋಳ ಬೆಳೆ ಹಾಕಿರುತ್ತಾರೆಂದು ನುಡಿಯುತ್ತಾರೆ. ವಾದಿ ದಾವ ಆಸ್ತಿಯಲ್ಲಿ ಜೋಳದ ಜೊತೆ ಕಾಫಿ, ಶುಂಠಿ ಹಾಕಿರುತ್ತಾರೆಂದರೆ ಸಾಕ್ಷಿ 2022 ರಲ್ಲಿ ಕಾಫಿ ಹಾಕಿರುತ್ತಾರೆಂದು ನುಡಿಯುತ್ತಾರೆ. ನಾನು, ನನ್ನ ಸಹೋದರ ಮತ್ತು ನನ್ನ ತಂದೆ ವಾದಿಯ ಜಮೀನಿಗೆ ತೊಂದರೆ ನೀಡಲು ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿರುತ್ತೇವೆಂದರೆ ಸರಿಯಲ್ಲ. ನನಗಾಗಲೀ ಅಥವಾ ನನ್ನ ತಂದೆಗಾಗಲೀ ಸ ನಂ 15 ರಲ್ಲಿ ಯಾವುದೇ ಪಹಣಿ ಇರುವುದಿಲ್ಲ ಎಂದರೆ ಸರಿ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/–

**ಪ್ರಧಾನ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**